ಮದನನಿಗೆ ಹೇಳಿ ನಾನು ಹೊರಟು ಬಿಟ್ಟೆ. ಅವಳ ಮನೆ ತಲುಪುವ ಹೊತ್ತಿಗೆ ಮನೆ ತುಂಬಾ ಜನ ಸೇರಿದ್ದರು. ಮುನ್ನ ಸತ್ತಿದ್ದಾಳೆ ಎನ್ನುವುದು ಸ್ಥಿರವಾಯ್ತು. ಮನೆಯೊಳಗೆ ಮೆಲ್ಲಗೆ ಕಾಲಿಟ್ಟೆ. ನನ್ನನ್ನು ನೋಡಿ ಕುಸುಮಾ ಅಳಲಿಲ್ಲ. ಕೈ ಹಿಡಿದು ಅವಳೇ ಕರೆದುಕೊಂಡು ಹೋಗಿ ಹೆಣದ ಮುಂದೆ ನಿಲ್ಲಿಸಿದಳು. ಅವಳು ಅಲ್ಲೇ ನಿಂತಳು. ನನಗಿದು ನಿಜಕ್ಕೂ ಅಚ್ಚರಿಯ ಸಂಗತಿ. ಹೆಣವನ್ನು ಚಟ್ಟಕಟ್ಟಿ ಅದರ ಮೇಲೆ ಮಲಗಿಸಿ ಎತ್ತಿಕೊಂಡು ಹೋದರು. ಹಿಂದೆ ಅವಳಪ್ಪ ಎನ್ನಿಸಿಕೊಂಡವನು ಸ್ಮಶಾನಕ್ಕೆ ನಡೆದ. ಹೊರಗೆ ಬಂದು ನಿಂತುಕೊಂಡಳು ಕುಸುಮಾ. ಅವಳ ಕಣ್ಣಲ್ಲಿ ಒಂದು ಹನಿ ನೀರಿಲ್ಲ. 'ಕುಸುಮಾ...' ಎಂದೆ.

'ಬಾ ಒಳಗೆ' ಎಂದು ಕರೆದುಕೊಂಡು ಒಳಗೆ ನಡೆದಳು. ಇಬ್ಬರೂ ನೆಲದ ಮೇಲೆ ಕುಳಿತುಕೊಂಡೆವು.

'ಇನ್ನಷ್ಟು ದಿವಸ ಮುನ್ನಾ ಬದುಕಿದ್ದರೂ ನನ್ನ ಸೇವೆಯಲ್ಲಿ ಕಿಂಚಿತ್ತು ಲೋಪವಾಗುತ್ತಿರಲಿಲ್ಲ. ಭೂಮಿಯ ಋಣ ಎನ್ನುವುದೊಂದಿದೆ, ಅದು ಯಾವಾಗ ತೀರುತ್ತದೋ ಆಗ ಹೊರಟು ಬಿಡಬೇಕು ವಿಧಿಯಿಲ್ಲ. ಆಗ ಯಾರೂ ತಡೆಯಲು ಬರುವುದಿಲ್ಲ' ಎಂದಳು.

'ಚಿಂತೆ ಮಾಡಬೇಡ, ನಿನ್ನ ಮನಸ್ಸಿಗೆ ತೃಪ್ತಿಯಾಗುವಷ್ಟು ನೀನು ಮುನ್ನಾಳ ಸೇವೆ ಮಾಡಿದ್ದೀಯ. ನಿನ್ನ ಸೇವೆಯಿಂದ ಅವಳ ಆತ್ಮಕ್ಕೂ ತೃಪ್ತಿಯಾಗಿದೆ' ಎಂದೆ.

'ಮುನ್ನಾ ಯಾರು? ನನ್ನ ಮಗಳು ಕಣೆ ಹೇಮಾ. ಅವಳ ಸೇವೆ ಕಾಯಾ ವಾಚಾ ಮನಸಾ ಮಾಡಿದ್ದೇನೆ ಬೇಜಾರಿಲ್ಲದೆ. ಇನ್ನಷ್ಟು ವರ್ಷ ಬದುಕಿದ್ದರೂ ಮಾಡುತ್ತಿದ್ದೆ. ನನ್ನ ಕಣ್ಣಮುಂದೆಯೇ ಹೋಗಿ ಬಿಟ್ಟಳು. ನಾನು ಸತ್ತು ಅವಳು ಬದುಕಿದ್ದರೆ, ನೆನೆಸಿಕೊಳ್ಳುವುದಕ್ಕೂ ನನ್ನಿಂದಾಗದು. ಇದೀಗ ಅವಳು ಸತ್ತು ನಾನು ಬದುಕಿದೆ ನೋಡು' ಎಂದಳು. ಅವಳ ಎದೆಯಾಳದಲ್ಲಿ ಬೆಂಕಿಯಂತೆ ಮುನ್ನಾಳ ಸಾವಿನ ನೋವು ಕಾಡುತ್ತಿದ್ದರೂ ಕುಸುಮಾ, ಮುನ್ನಾ ಬದುಕಿದ್ದಾಗಲೂ ಸತ್ತಮೇಲೂ ಇವತ್ತಿನವರೆಗೂ ಎಂದೂ ಅಳಲಿಲ್ಲ.

## ಪ್ರೇಮಾ ಭಟ್

ಕತೆಗಾರ್ತಿ ಉಡುಪಿ ಜಿಲ್ಲೆ ಹೆರ್ಗದವರು. ಕರ್ನಾಟಕ ಸಚಿವಾಲಯ ವಿಧಾನಸೌಧದಲ್ಲಿ 33 ವರ್ಷ ಸೇವೆ ಸಲ್ಲಿಸಿ, ಶಾಖಾಧಿಕಾರಿಯಾಗಿ ಸ್ವಯಂ ನಿವೃತ್ತಿ ಪಡೆದಿದ್ದಾರೆ.

500ಕ್ಕೂ ಹೆಚ್ಚು ಕತೆಗಳನ್ನು ಅವರು ಬರೆದಿದ್ದಾರೆ. ಅವರು ಪ್ರಕಟಿಸಿರುವ 365 ಕತೆಗಳ ಬೃಹತ್ ಕಥಾಸಂಗ್ರಹ 'ಕಥಾವರ್ಷ' ಕನ್ನಡದ ವಿಶೇಷ ಪ್ರಯತ್ನಗಳಲ್ಲೊಂದು. ಅವರು ಬರೆದಿರುವ 53 ಕಾದಂಬರಿಗಳಲ್ಲಿ ಸುಮಾರು 40 ಕಾದಂಬರಿಗಳು ಪತ್ರಿಕೆಗಳಲ್ಲಿ ಧಾರಾವಾಹಿಗಳಾಗಿ ಪ್ರಕಟವಾಗಿವೆ.

ಕವನ, ಲೇಖನ, ಅಂಕಣ, ಪ್ರವಾಸ ಕಥನ, ವ್ಯಕ್ತಿಚಿತ್ರಣಗಳ ಪುಸ್ತಕಗಳನ್ನೂ ಅವರು ಪ್ರಕಟಿಸಿದ್ದಾರೆ. ಅವರ ಕಾದಂಬರಿಗಳನ್ನು ಆಧರಿಸಿ 'ಆಡಿ ಬಾ ಅರಗಿಣಿ', 'ಬೆಕ್ಕಿನ ಕಣ್ಣು' ಎಂಬ ಸಿನಿಮಾಗಳು ಆಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.